ವಿಷಯ:- ಗುಳ್ಳೇದಗುಡ್ಡಕ್ಕೆ ಕುಡಿಯುವ ನೀರಿನ ಸರಬರಾಜು.

51(126)

ಶ್ರೀ ರಾಜಶೇಖರ್ ಶೀಲವಂತ (ಗುಳೇದಗುಡ್ಡ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1. ಗುಳೇದಗುಡ್ಡದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಹಾಗೂ ಯೋಜನೆಯ ಕಾರ್ಯಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

1. ಗುಳೇದಗುಡ್ಡದಲ್ಲಿ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಯೋಜನೆಯ ಕಾರ್ಯವು ಪ್ರಗತಿಯಲ್ಲಿದ್ದು ಇದನ್ನು ಇನ್ನೂ ತ್ವರಿತಗೊಳಿಸಲಾಗುವುದು.

2. ಈ ಯೋಜನೆಯನ್ನು ಮಾರ್ಚ 1997ರ ಅಂತ್ಯದೊಳಗೆ ಚಾಲ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಪರಿಶಿಷ್ಟ ಅಭಿವೃದ್ಧಿ ಯೋಜನೆಗಳ ಜಾರಿಗೆ ಪ್ರತ್ಯೇಕ ಸಂಸ್ಥೆ.

52(104)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಪರಿಶಿಷ್ಟರ ಅಭಿವೃದ್ಧಿಗೆ ನೀಡಲಾಗುತ್ತಿರುವ ಸೌಲಭ್ಯಗಳು ಫಲಾನುಭವಿಗಳಿಗೆ ದೊರೆಯದೆ ದುರ್ಬಳಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿಶೇಷ ಘಟಕ ಯೋಜನೆಯಡಿ ಕೇಂದ್ರ ಸರ್ಕಾರವು ನೀಡುತ್ತಿರುವ ಹಣವೆಷ್ಟು;

ಇ) ಈ ಯೋಜನೆಯಡಿ ಯಾವ ಯಾವ ಕ್ಷೇತ್ರಗಳಿಗೆ ಹಣವನ್ನು ಮೀಸಲಿಡಲಾಗಿದೆ; (ಕ್ಷೇತ್ರವಾರು ವಿವರ ನೀಡುವುದು);

ಈ) ಪರಿಶಿಷ್ಟರ ಅಭಿವೃದ್ಧಿಗೆ ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಹೌದು. ದುರ್ಬಳಕೆಯಾಗಿರುವ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಅಂತಹ ಪ್ರಕರಣಗಳನ್ನು ಪರಿಶೀಲಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಲು ಈಗಾಗಲೇ ಕ್ರಮ ಕೈಗೊಂಡಿದೆ. ಹಾಗೂ ಈ ರೀತಿಯಾಗದಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಆ) ಕೇಂದ್ರ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ವಿಶೇಷ ಕೇಂದ್ರೀಯ ಸಹಾಯವನ್ನು ಬಿಡುಗಡೆ ಮಾಡಿರುವ ಹಣದ ವಿವರ ಈ ಕೆಳಗಿನಂತಿದೆ.

ವರ್ಷ	ಬಿಡುಗಡೆಯಾದ ಹಣ (ರೂ. ಲಕ್ಷಗಳಲ್ಲಿ)
1993-94	1282.71
1994-95	1873.76
1995-96	2220.05

ಇ) 1996-97ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ವಿವಿಧ ಕ್ಷೇತ್ರಗಳಿಗೆ ನಿಗದಿಪಡಿಸಿರುವ ಅನುದಾನವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಈ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಆರ್ಥಿಕ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲು ರಾಜ್ಯದಲ್ಲಿ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಎಂಬ ಸಂಸ್ಥೆಯನ್ನು ಸ್ಥಾಪಿಸಿರುವುದರಿಂದ ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಅನುಬಂಧ-1

1996-97ನೇ ಸಾಲಿಗೆ ವಿಶೇಷ ಘಟಕ ಯೋಜನೆಯಡಿ ವಿವಿಧ ಇಲಾಖೆಗಳಿಗೆ ಒದಗಿಸಲಾದ ಹಣದ ವಿವರ.

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ರಾಜ್ಯ ವಲಯ	ಜಿಲ್ಲಾ ವಲಯ	ಒಟ್ಟು
1.	ಕೃಷಿ	24.00	186.37	210.37
2.	ತೋಟಗಾರಿಕೆ	88.60	113.60	202.20
3.	ಭೂಸಾರ ಸಂರಕ್ಷಣೆ	-	93.16	93.16
4.	ಪಶು ಸಂಗೋಪನೆ	37.35	124.08	161.43
5.	ಮೀನುಗಾರಿಕೆ	22.00	3.80	25.80
6.	ಕೆ.ಎಸ್.ಸಿ.ಎ.ಆರ್.ಡಿ.ಬ್ಯಾಂಕ್	131.00	-	131.00
7.	ಅರಣ್ಯ	367.00	4.50	371.50
8.	ಸಹಕಾರ	170.00	-	170.00

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ರಾಜ್ಯ ವಲಯ	ಜಿಲ್ಲಾ ವಲಯ	ಒಟ್ಟು
9.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್.			
ಎ.	ಐ.ಆರ್.ಡಿ.ಪಿ.	-	1128.00	1128.00
ಬಿ.	ಟ್ರೈಸಂ	70.00	108.00	178.00
ಸಿ.	ಡಿ.ಪಿ.ಎ.ಪಿ.	-	210.00	210.00
ಡಿ.	ಜವಾಹರ್ ರೋಜ್‌ಗಾರ್ ಯೋಜನೆ	-	1335.00	1335.00
ಇ.	ಉದ್ಯೋಗ ಭರವಸೆ ಯೋಜನೆ	480.00	-	480.00
ಎಫ್.	ನೆಮ್ಮದಿ	122.00	-	122.00
ಜಿ.	ಜಿಲ್ಲಾ ಪಂಚಾಯತ್‌ಗಳಿಗೆ ಅನುದಾನ	-	933.00	933.00
ಹೆಚ್.	ಗ್ರಾಮ ಪಂಚಾಯತ್‌ಗಳಿಗೆ ಅನುದಾನ	-	908.00	908.00
ಐ.	ಸಾಂಪ್ರದಾಯಕವಲ್ಲದ ಇಂಧನ ಮೂಲಗಳು	168.00	-	168.00
10.	ಗ್ರಾಮೀಣ ನೀರು ಸರಬರಾಜು	-	1299.51	1299.51
11.	ಸಣ್ಣ ನೀರಾವರಿ	-	363.24	363.24
12.	ಕರ್ನಾಟಕ ವಿದ್ಯುತ್ ಮಂಡಳಿ	1310.00	-	1310.00
13.	ಕೈಮಗ್ಗ	-	10.18	10.18
14.	ರೇಷ್ಮೆ	119.00	102.85	221.85
15.	ಸಣ್ಣ ಕೈಗಾರಿಕೆ	465.00	91.49	556.49
16.	ರಸ್ತೆ ಮತ್ತು ಸೇತುವೆಗಳು	-	940.50	940.50
17.	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	2375.00	348.00	2723.00
18.	ಕಾಲೆಜು ಶಿಕ್ಷಣ	53.00	-	53.00

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ರಾಜ್ಯ ವಲಯ	ಜಿಲ್ಲಾ ವಲಯ	ಒಟ್ಟು
19.	ತಾಂತ್ರಿಕ ಶಿಕ್ಷಣ	34.00	-	34.00
20.	ಕನ್ನಡ ಮತ್ತು ಸಂಸ್ಕೃತಿ	23.25	-	23.25
21.	ಆರೋಗ್ಯ	-	585.00	585.00
22.	ಕರ್ನಾಟಕ ನಗರ ನೀರು ಸರಬರಾಜು: ಒಳಚರಂಡಿ ಮಂಡಳಿ	500.00	-	500.00
23.	ಕೊಳವೆ ನಿರ್ಮೂಲನಾ ಮಂಡಳಿ	1713.00	-	1713.00
24.	ನೆಹರು ರೋಜ್‌ಗಾರ್ ಯೋಜನೆ	65.00	-	65.00
25.	ಪೌರಾಡಳಿತ	161.00	-	161.00
26.	ವಸತಿ (ಬಡವರಿಗೆ ಮನೆಗಳು)	2940.00	-	2940.00
27.	ಸಮಾಜ ಕಲ್ಯಾಣ	13783.00	2979.02	16762.02
28.	ಉದ್ಯೋಗ ಮತ್ತು ತರಬೇತಿ	104.00	-	104.00
29.	ಮಹಿಳಾ ಮತ್ತು ಮಕ್ಕಳ ಕಲ್ಯಾಣ	246.00	-	246.00
30.	ವಿಶೇಷ ಪೌಷ್ಟಿಕಾಂಶ	-	236.07	236.07
	ಅಧಿಕಾರಯುಕ್ತ ಸಮಿತಿಯಲ್ಲಿ ಶಿಫಾರಸ್ಸು ಮಾಡಿರುವಂತೆ 3ನೇ ಬಾರಿ ಕ್ರೋಢೀಕರಿಸಲು ಅನುಮೋದಿಸಿರುವ ಮೊತ್ತ	733.00	-	733.00
	ಒಟ್ಟು -	26304.20	12103.37	38407.57

1996-97ನೇ ಸಾಲಿನಲ್ಲಿ ಕೇಂದ್ರ ಯೋಜನೆಯ ಹಣ ರೂ. 2654.54 ಲಕ್ಷಗಳು ಕೇಂದ್ರ ಸರ್ಕಾರದಿಂದ ನಿಗದಿಗೊಳಿಸಲಾಗಿದ್ದು ಇದರಲ್ಲಿ ರೂ. 694.87 ಲಕ್ಷಗಳು ಜಿಲ್ಲಾ ಪಂಚಾಯತ್ ಹಾಗೂ ನಿಗಮ ಮಂಡಳಿಗಳಿಗೆ ಬಿಡುಗಡೆ ಮಾಡಲಾಗಿದೆ.